# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 02-08-2022

## ಜನವಾಡಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 75/2022 ಕಲಂ 279, 338, 304(ಎ) ಐಪಿಸಿ :-

ದಿನಾಂಕ: 01/08/2022 ರಂದು 1115 ಗಂಟೆಗೆ ಬೀದರನ ಶ್ರೀ ಆಸ್ಪತ್ರೆಯಿಂದ ರಸ್ತೆ ಅಪಘಾತದ ಬಗ್ಗೆ ಮಾಹಿತಿ ಬಂದಿದ ಮೇರೆಗೆ ಆಸ್ಪತ್ರೆಗೆ ಭೆಟಿ ನೀಡಿ ಗಾಯಾಳು ರುದ್ರಾಕ್ಷ ತಂದೆ ಗುಣವಂತ ಚೌವ್ಹಾಣ ವಯ: 5 ವರ್ಷ ಸಾ:ಬೆನಕನಳ್ಳಿ ಗ್ರಾಮ ಇವನಿಗೆ ಪರಿಶೀಲಿಸಿ ಆಸ್ಪತ್ರೆಯಲ್ಲಿ ಹಾಜರಿದ್ದ ಗಾಯಾಳುವಿನ ತಾಯಿ ಫಿರ್ಯಾದಿ ಶ್ರೀಮತಿ ಅನುಶಯಾ ಗಂಡ ಗುಣವಂತ ಚೌವ್ಹಾಣ ಸಾ: ಬೆನಕಣ್ಣಿ ಗ್ರಾಮ ರವರಿಗೆ ವಿಚಾರಿಸಿದ್ದು ಸದರಿಯವರು ತಮ್ಮ ಹೇಳಿಕೆ ದೂರು ನೀಡಿದ್ದು ಸಾರಾಂಶವೇನೆಂದರೆ, ಇವರ ಗಂಡ ಗುಣವಂತ ಇವರು ಬೀದರನ ಖಾಸಗಿ ಶಾಲೆಯಲ್ಲಿ ವಾಚ್ ಮೇನ್ ಕೆಲಸ ಮಾಡುತ್ತಾರೆ. ಇವರಿಗೆ ಇಬ್ಬರು ಗಂಡು ಮಕ್ಕಳಿರುತ್ತಾರೆ. ಹೀಗಿರುವಾಗ ದಿನಾಂಕ: 01/08/2022 ರಂದು ಬೆಳಿಗ್ಗೆ ಮಗ ರುದ್ರಾಕ್ಷ ಇವನು ಶಾಲೆಗೆ ಹೋಗುವ ಸಲುವಾಗಿ ಮನೆಯಿಂದ ಹೊರಗೆ ಬಂದು ನಡೆದುಕೊಂಡು ಹೋಗುತ್ತಿದ್ದಾಗ ಮನೆಯ ಮುಂದೆ ಇರುವ ಶಿವಾಜಿ ಚೌಕ್ ಹತ್ತಿರ ಹೋದಾಗ ಬೆಳಿಗ್ಗೆ 0915 ಗಂಟೆ ಸುಮಾರಿಗೆ ಬೀದರ ಕಡೆಯಿಂದ ಒಬ್ಬ ಕಾರ್ ಚಾಲಕ ತನ್ನ ಕಾರ್ ನಂ. ಕೆಎ 38 ಎಮ್. 3850 ನೇದನ್ನು ಅತೀ ವೇಗ ಹಾಗು ನಿಷ್ಕಾಳಜೀತನದಿಂದ ಚಲಾಯಿಸಿಕೊಂಡು ಬಂದು ರುದ್ರಾಕ್ಷ ಇವನಿಗೆ ಡಿಕ್ಕಿ ಹೊಡೆದಿರುತ್ತಾನೆ. ಕೂಡಲೇ ನಾನು ಮತ್ತು ನನ್ನ ಅತ್ತೆಯಾದ ಕಲ್ಲುಬಾಯಿ, ಹಾಗು ನಮ್ಮೂರ ಸೋಪಾನ ಚೌವ್ಹಾಣ, ಸಂತೋಷ ಚೌವ್ಹಾಣ ರವರು ಹತ್ತಿರ ಹೋಗಿ ನನ್ನ ಮಗ ರುದ್ರಾಕ್ಷನಿಗೆ ಎಬ್ಬಿಸಿ ನೋಡಲು ತಲೆಗೆ ಭಾರಿ ರಕ್ತಗಾಯ ಆಗಿದ್ದು, ಬಲಕಾಲಿನ ಪಿಂಡರಿ ಕೆಳಭಾಗದಲ್ಲಿ ಭಾರಿ ಗುಪ್ತಗಾಯ ಆಗಿತ್ತು. ಎಡಕಾಲಿನ ಮೊಣಕಾಲಿಗೆ ತರಚಿದ ಗಾಯ ಆಗಿರುತ್ತದೆ. ಚಿಕಿತ್ಸೆ ಕುರಿತು ಶ್ರೀ ಆಸ್ಪತ್ರೆಗೆ ತಂದು ಸೇರಿಕ್ ಮಾಡಿರುತ್ತಾರೆ ರುದ್ರಾಕ್ಷ ತಂದೆ ಗುಣವಂತ ಚೌವ್ಹಾಣ ಈತನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ತನಗಾದ ಭಾರಿ ರಕ್ತ ಗಾಯ ಮತ್ತು ಗುಪ್ತಗಾಯಗಳಿಂದ ಚಿಕಿತ್ಸೆ ಫಲಕಾರಿಯಾಗದೆ ರಂದು 18:20 ಗಂಟೆಗೆ ಮೃತಪಟ್ಟಿರುತ್ತಾನೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

## ಗಾಂಧಿಗಂಜ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 117/2022 ಕಲಂ 87 ಕೆಪಿ ಕಾಯ್ದೆ ;-

ದಿನಾಂಕ 31/07/2022 ರಂದು 1800 ಗಂಟೆಗೆ ಪಿ.ಐ. ರವರು ಗಾಂಧಿಗಂಜ ಪೊಲೀಸ್ ಠಾಣೆಯಲ್ಲಿದ್ದಾಗ ಗಾಂಧಿಗಂಜ ಠಾಣಾ ವ್ಯಾಪ್ತಿಯ ಗೋರನಳ್ಳಿ ಗ್ರಾಮದ ರುದ್ರ ಭೂಮಿ ಹತ್ತಿರ ಸಾರ್ವಜನಿಕ ಖುಲ್ಲಾ ಸ್ಥಳದಲ್ಲಿ ಸುಮಾರು 4-5 ಜನ ಕೂಡಿಕೊಂಡು ಹಣ ಹಚ್ಚಿ ಪಣ ತೊಟ್ಟು ಅಂದರ್ ಬಾಹರ್ ನಸೀಬಿನ ಜೂಜಾಟ(ಇಸ್ಪೀಟ್) ಆಡುತ್ತಿದ್ದಾರೆ ಅಂತ ಖಚಿತ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ದಾಳಿ ಮಾಡಿ ಜೂಜಾಟ ಆಡುತ್ತಿದ್ದ ಎಲ್ಲಾ 05 ಜನರಿಗೆ ಹಿಡಿದುಕೊಂಡು ವಿಚಾರಣೆ ಮಾಡಿ ಅಂಗ ಝಡ್ತಿ ಮಾಡಿ ನೋಡಲು 1] ಅನೀಲ್‌ರೆಡ್ಡಿ ತಂದೆ ರಾಮಚಂದ್ರರೆಡ್ಡಿ, ವಯಸ್ಸು: 46 ವರ್ಷ, ಜಾತಿ: ರೆಡ್ಡಿ, ಉದ್ಯೋಗ: ಒಕ್ಕಲುತನ ಕೆಲಸ, ಸಾ: ಗೋರನಳ್ಳಿ ಗ್ರಾಮ, ತಾ: ಬೀದರ ಅಂತ ತಿಳಿಸಿದ್ದು ಈತನ ಹತ್ತಿರ 800/-ರೂ ನಗದು ಹಣ ಇದ್ದವು, 2] ಜಗನಾಥ ತಂದೆ ಚಂದ್ರಪ್ಪಾ ಅರಜಗೊಂಡಾ, ವಯಸ್ಸು: 33 ವರ್ಷ, ಜಾತಿ: ಕುರುಬ, ಉದ್ಯೋಗ: ಚಾಲಕ, ಸಾ: ಗೋರನಳ್ಳಿ ಗ್ರಾಮ, ತಾ: ಬೀದರ. ಅಂತ ತಿಳಿಸಿದ್ದು ಈತನ ಹತ್ತಿರ 800/-ರೂ ನಗದು ಹಣ ಇದ್ದವು, 3] ಗಣಪತಿ ತಂದೆ ಸಿದ್ದರಾಮ ಹಳೆಂಬುರ್, ವಯಸ್ಸು: 42 ವರ್ಷ, ಜಾತಿ: ಕುರುಬ, ಉದ್ಯೋಗ: ಕೂಲಿ ಕೆಲಸ, ಸಾ: ಗೋರನಳ್ಳಿ ಗ್ರಾಮ, ತಾ: ಬೀದರ ಅಂತ ತಿಳಿಸಿದ್ದು ಈತನ ಹತ್ತಿರ 900/-ರೂ ನಗದು ಹಣ ಇದ್ದವು, 4] ಸುರೇಶ ತಂದೆ ನಾಗಣ್ಣಾ ಗಾದಗಿದೊವರು, ವಯಸ್ಸು: 33 ವರ್ಷ, ಜಾತಿ: ಕುರುಬ, ಉದ್ಯೋಗ: ಕೂಲಿ ಕೆಲಸ, ಸಾ: ಗೋರನಳ್ಳಿ ಗ್ರಾಮ, ತಾ: ಬೀದರ ಅಂತ ತಿಳಿಸಿದ್ದು ಈತನ ಹತ್ತಿರ 1000/-ರೂ ನಗದು ಹಣ ಇದ್ದವು, 5] ಓಂಕಾರ ತಂದೆ ಸಿದ್ದರಾಮ ತೆಲಗುದೊಡ್ಡಿ, ವಯಸ್ಸು: 41 ವರ್ಷ, ಜಾತಿ: ಎಸ್‌ಸಿ (ಹೊಲೆಯಾ), ಉದ್ಯೋಗ: ಸೆಂಟ್ರಿಂಗ್ ಕೆಲಸ, ಸಾ: ಗೋರನಳ್ಳಿ ಗ್ರಾಮ, ತಾ: ಬೀದರ ಅಂತ ತಿಳಿಸಿದ್ದು ಈತನ ಹತ್ತಿರ ರೂ. 900/- ರೂ ನಗದು ಹಣ ಇದ್ದವು, ನಂತರ ಎಲ್ಲರ ಮಧ್ಯೆ ಇರುವ ಸ್ಥಳ ಪರಿಶೀಲಿಸಿ ನೋಡಲು ಎಲ್ಲರ ಮದ್ಯ ರೂ. 800/- ಹಾಗೂ 52 ಇಸ್ಪೇಟ ಎಲೆಗಳು ಇದ್ದವು ಹೀಗೆ ಜೂಜಾಟದಲ್ಲಿ ತೊಡಗಿಸಿದ್ದ ಒಟ್ಟು ರೂ. 5200/- ನಗದು ಹಣ ಹಾಗೂ 52 ಇಸ್ಪೇಟ ಎಲೆಗಳು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.